ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 34 ಡಿವಿಪಿ(2) 2017

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:18-12-2017.

## ಸುತ್ತೋಲೆ

ವಿಷಯ: 2018-19ನೇ ಸಾಲಿಗೆ ರಾಜ್ಯದಲ್ಲಿ ಹಾಲಿ ಇರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ನವದೆಹಲಿಯ ಎಐಸಿಟಿಇ ಯ ಹಾಗೂ ರಾಜ್ಯ ಸರ್ಕಾರದ ಮಾನ್ಯತೆ ಪಡೆಯುವ ಬಗ್ಗೆ.

ಉಲ್ಲೇಖ : ನವದೆಹಲಿಯ ಎಐಸಿಟಿಇ ಯ ವೆಬ್ ಪೋರ್ಟಲ್‌ನಲ್ಲಿ ನೀಡಲಾಗಿರುವ ಸಾರ್ವಜನಿಕ ಪ್ರಕಟಣೆ ಸಂಖ್ಯೆ: ಎಡಿವಿಟಿ ನಂ. ಅಪ್ರೂವಲ್/2017.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದಲ್ಲಿ ನಮೂದಿಸಿರುವ ನವದೆಹಲಿಯ ಎಐಸಿಟಿಇ ಯ ಸಾರ್ವಜನಿಕ ಪ್ರಕಟಣೆ (ಪಬ್ಲಿಕ್ ನೋಟಿಸ್) ಯನುಸಾರ 2018-19ನೇ ಸಾಲಿಗೆ ಹೊಸ ಪಾಲಿಟೆಕ್ನಿಕ್‌ಗಳ ಪ್ರಾರಂಭಿಕೆಗಾಗಿ ಹಾಗೂ ಹಾಲಿ ಇರುವ ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿದಂತೆ ಎಐಸಿಟಿಇಯ ಮಾನ್ಯತೆ ವಿಸ್ತರಣೆಗಾಗಿ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.. ಅದರಂತೆ. ಈ ದಿಸೆಯಲ್ಲಿ ಕೂಡಲೇ ಅಗತ್ಯ ಕ್ರಮ ಜರುಗಿಸಬೇಕಾಗಿ ತಿಳಿಸಲಾಗಿದೆ. ಎಐಸಿಟಿಇಯು 2018-19ನೇ ಸಾಲಿಗೆ ಮಾರ್ಗಸೂಚಿಗಳನ್ನು ಭಾಗಶ: ಪರಿಷ್ಕರಿಸಿರುತ್ತದೆ. ಇವುಗಳನ್ನು ಎಐಸಿಟಿಇ ಯ "Approval Process Handbook" '2018-19' ರಲ್ಲಿ ವೀಕ್ಷಿಸಬಹುದಾಗಿದೆ.

ಎಐಸಿಟಿಇಯು ನಿಗಧಿಪಡಿಸಿರುವ ಕಡೆಯ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿ ಸೂಚಿಸಲಾಗಿದೆ. ಆದ್ದರಿಂದ ಈ ದಿಸೆಯಲ್ಲಿ ಯಾವುದೇ ರೀತಿ ವಿಳಂಬಕ್ಕೆ ಅವಕಾಶವನ್ನು ನೀಡಬಾರದೆಂದು ಹಾಗೂ ಸಕಾಲದಲ್ಲಿ ಅರ್ಜಿಗಳನ್ನು ನವದೆಹಲಿಯ ಎಐಸಿಟಿಇಗೆ ಸಲ್ಲಿಸಬೇಕಾಗಿ ತಿಳಸಲಾಗಿದೆ.

ಎಐಸಿಟಿಇಯ ಆನ್‌ಲೈನ್ ಅರ್ಜಿಗಳನ್ನು ಬಹಳ ಜಾಗರೂಕತೆಯಿಂದ ಭರ್ತಿಮಾಡಲು ತಿಳಿಸಲಾಗಿದೆ. ಮತ್ತು ಯಾವುದೇ ಲೋಪದೋಷಗಳಿಗೆ (deficiencies) ಅವಕಾಶವನ್ನು ನೀಡದೆ ಆನ್‌ಲೈನ್ ಅರ್ಜಿಯನ್ನು ಹೆಚ್ಚಿನ ಜವಾಬ್ದಾರಿಯಿಂದ ಅಪ್‌ಲೋಡ್ ಮಾಡಲು ತಿಳಿಸಲಾಗಿದೆ. ಎಐಸಿಟಿಇಗೆ ಸಲ್ಲಿಸಿದ ಆನ್‌ಲೈನ್ ಅರ್ಜಿಯ ಒಂದು ಹಾರ್ಡ್‌ಕಾಪಿ ಮತ್ತು ಸಾಫ್ಟ್‌ಕಾಪಿಯನ್ನು ತಪ್ಪದೆ ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿ ಸಹ ತಿಳಿಸಲಾಗಿದೆ.

18/12/17

ಜಂಟಿ ನಿರ್ದೇಶಕರು (ಎಟಿಎಸ್)

ಇವರಿಗೆ

1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.
2. ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ - ನಿರ್ದೇಶನಾಲಯದ ಇ-ಗೌರ್‌ನೆನ್ಸ್ ಸೆಲ್‌ಗೆ. (Kindly upload this circular along with AICTE's Public Notice in DTE/BTE website)